**ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ.**

O.S. No– 366/2024

PW–2

ದಿನಾಂಕಃ 05.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟಿ ಸವಾಲುಃ ಶ್ರೀ.ಪಿ.ಪಿ.ಎನ್. 7 ರಿಂದ 9 ನೇ ಪ್ರತಿವಾದಿ ಪರ ವಕೀಲರಿಂದಃ** ನನಗೆ ನ್ಯಾಯಾಲಯದಿಂದ ಸಮನ್ಸ ಬಂದಿಲ್ಲ. ವಾದಿ ನನಗೆ ದೂರದ ಸಂಬಂಧಿಗಳು. ಸರ್ವೆ ನಂ. 120 ಇರುತ್ತದೆ. ಕ್ಷೇತ್ರ ಗೊತ್ತಿಲ್ಲ. ವಾದಿಯರಿಗೆ ದಾವಾ ಆಸ್ತಿ ಹೇಗೆ ಬಂತು ಎಂದರೆ ನಾನು ದಾಖಲಾತಿಗಳ ಆಧಾರದ ಮೇಲೆ ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿದ್ದೇನೆ. ಯಾವ ದಾಖಲೆಗಳು ಗೊತ್ತಿಲ್ಲ. ನಾನು ಶಾಲೆ ಕಲಿತಿಲ್ಲ. ದಾವಾ ಆಸ್ತಿ ನಾಗಪ್ಪ ರಾಮಪ್ಪ ಚಲವಾದಿ ಇವರಿಂದ ವಾದಿಯರಿಗೆ ಬಂದಿರುತ್ತದೆ. ನಾಗಪ್ಪನಿಗೆ ದಾವಾ ಆಸ್ತಿ ಪಾಲುವಾಟ್ನಿಯಲ್ಲಿ ಬಂದಿದೆ ಎಂದರೆ ಸರಿ. ಪಾಲುವಾಟ್ನಿ ಆದನಂತರ ದಾವಾ ಆಸ್ತಿ ನಾಗಪ್ಪನ ಸ್ವಂತ ಆಸ್ತಿಯಾಯಿತು ಎಂದರೆ ಸರಿ. ನಾಗಪ್ಪ ಮನೆಯ ಹಿರೇತನ ಮಾಡುತ್ತಿದ್ದರು ಎಂದರೆ ಸರಿ. ನಾಗಪ್ಪ ಎಲ್ಲ ಹೆಣ್ಣು ಮಕ್ಕಳು ಮದುವೆಯನ್ನು ಖರ್ಚು ಮಾಡಿ ಮಾಡಿದ್ದಾರೆ ಎಂದರೆ ಸರಿ. ಅವರ ಕುಟುಂಬದಲ್ಲಿ ಅಡಚಣೆಗಳು ಆಯಿತು ಎಂದರೆ ಸರಿಯಲ್ಲ. ನಾಗಪ್ಪನಿಗೆ ಅಡಚಣೆಯಿದ್ದ ಕಾರಣ 7 ರಿಂದ 9 ನೇ ಪ್ರತಿವಾದಿ ದಾವಾ ಆಸ್ತಿಯನ್ನು ನಾಗಪ್ಪನ ಕಡೆಯಿಂದ ಖರೀದಿಸಿದರು ಎಂದರೆ ಸರಿಯಲ್ಲ. ಖರೀದಿಸಿದ ನಂತರ ದಾವಾ ಆಸ್ತಿಯ ಕಬ್ಜೆಯಲ್ಲಿ 7 ರಿಂದ 9 ನೇ ಪ್ರತಿವಾದಿ ಇದ್ದಾರೆ ಎಂದರೆ ಸರಿ. ಹಿರೇತನ ಮಾಡುವಾಗ ನಾನು ಒಬ್ಬನೇ ಇದ್ದೆ, ಬೇರೆ ಹಿರಿಯರು ಇರಲಿಲ್ಲ. ದಾವಾ ಆಸ್ತಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡ ವಾದಿಯರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

Sd/–

ಹೆಚ್ಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ.